# ಶ್ರೀಮಾತೆಯವರ ನೆನಪು

ಮೂಲ ಬಂಗಾಳಿ : ಇಂದುಬಾಲಾ ಘೋಷ್ ಅನುವಾದ : ಸ್ವಾಮಿ ಜ್ಞಾನಯೋಗಾನಂದ

ನನ್ನ ತಂದೆಯವರ ಹೆಸರು ಚಂದ್ರಮೋಹನ ದತ್ತ ಎಂದು. ನಮ್ಮ ಮನೆಯಿದ್ದುದು ಪೂರ್ವಬಂಗಾಳದಲ್ಲಿ (ಈಗಿನ ಬಾಂಗ್ಲಾ ದೇಶ). ವಿಕ್ರಮಪುರದಲ್ಲಿ ಬರುವ ಗಾವುಪಾಡಾ ಗ್ರಾಮದಲ್ಲಿ ನಮ್ಮ ಅವಿಭಕ್ತ ಕುಟುಂಬವಿದ್ದುದು. ನನ್ನ ಅಜ್ಜನ ಹೆಸರು ಕೃಷ್ಣ ಚಂದ್ರ ದತ್ತ. ಅವರಿಗೆ ಐವರು ಗಂಡುಮಕ್ಕಳು ಹಾಗೂ ಮೂವರು ಹೆಣ್ಣುಮಕ್ಕಳು. ನನ್ನ ತಂದೆ ಚಂದ್ರಮೋಹನ ದತ್ತ ನನ್ನಜ್ಜನ ಮೂರನೇ ಮಗ. ಎಲ್ಲರಿಗಿಂತ ಹಿರಿಯ ಮಗ ಕಾಳೀಕುಮಾರ ದತ್ತ. ಅವರು ರೈಲ್ವೇಯಲ್ಲಿ ಕೆಲಸ ಮಾಡುತ್ತಿದ್ದರು; ಕಲ್ಕತ್ತೆಯ ಶೋಭಾಬಜಾರ್‌ನಲ್ಲಿ ವಾಸವಾಗಿದ್ದರು. ತಂದೆಯವರು ಊರಿನಿಂದ ಕಲ್ಕತ್ತೆಗೆ ಬಂದು, ನನ್ನ ದೊಡ್ಡಪ್ಪ ಕಾಳೀಕುಮಾರನ ಮನೆಯಲ್ಲಿದ್ದುಕೊಂಡು ಉದ್ಯೋಗ ಹುಡುಕತೊಡಗಿದರು. ಒಂದು ದಿನ ದೊಡ್ಡಪ್ಪ ನನ್ನ ತಂದೆಗೆ ಹೇಳಿದರು: ''ಹಣ ಕೊಡದಿದ್ದರೆ ನಿನಗೆ ಅನ್ನ ಹಾಕಲಾಗದು.'' ನನ್ನ ತಂದೆ ದೊಡ್ಡಪ್ಪನನ್ನು ದೊಡ್ಡಣ್ಣ ಎಂದು ಕರೆಯುತ್ತಿದ್ದರು. ದೊಡ್ಡಣ್ಣನ ಬಾಯಿಯಿಂದ ಈ ರೀತಿ ನಿಷ್ಠುರ ಮಾತನ್ನು ಕೇಳಿ, ತನ್ನನ್ನೇ ಶಪಿಸುತ್ತ ನನ್ನ ತಂದೆ ಪ್ರತಿಜ್ಞೆ ಮಾಡಿಕೊಂಡರು : ಈ ದಿನದೊಳಗಾಗಿ ನನಗೆ ಏನಾದರೂ ಉದ್ಯೋಗ ಸಿಕ್ಕೇ ತೀರಬೇಕು; ಇಲ್ಲದಿದ್ದರೆ ರೈಲ್ವೇಹಳಿಯ ಮೇಲೆ ಎಲ್ಲಿಯವರೆಗೆ ದೃಷ್ಟಿಗೆ ಗೋಚರವಾಗುತ್ತದೋ ಅಲ್ಲಿಯತನಕ ನಡೆಯುತ್ತಾ ಹೋಗುತ್ತೇನೆ— ಎಂಬುದಾಗಿ. ಅಂದು ರಸ್ತೆಗಿಳಿದು ಹೊರಟ ಮೇಲೆ ಒಬ್ಬ ವ್ಯಕ್ತಿಯಿಂದ ತಿಳಿದು ಬಂತು, ರಾಮಕೃಷ್ಣ ಮಿಷನ್‌ಗೆ ಹೋಗಿ ವಿಚಾರಿಸಿದರೆ ಅಲ್ಲೇನಾದರೂ ಕೆಲಸ ಸಿಕ್ಕಿದರೂ ಸಿಗಬಹುದು ಎಂದು. ನನ್ನ ತಂದೆ ಹಿಂದೆಂದೂ ರಾಮಕೃಷ್ಣ ಮಿಷನ್ನಿನ ಬಗ್ಗೆ ಕೇಳಿರಲಿಲ್ಲ. ಅದೇನೇ ಇರಲಿ, ಅಲ್ಲಿ ವಿಚಾರಿಸುತ್ತ ಕೊನೆಗೆ ಅವರು 'ಉದ್ಬೋಧನ'ಕ್ಕೆ ಬಂದು ತಲುಪಿದರು.

'ಉದ್ಬೋಧನ'ದ (ಶ್ರೀಮಾತೆಯವರ ಮನೆಯ) ಹೊರಗಿನ ವರಾಂಡದಲ್ಲಿ ನನ್ನ ತಂದೆ ಕುಳಿತಿದ್ದರು. ಒಬ್ಬ ಕೆಲಸದವನು ಹೊರಬಾಗಿಲ ಬಳಿಗೆ ಬಂದಾಗ ನನ್ನ ತಂದೆ ಅವನನ್ನು, ''ಇದು ರಾಮಕೃಷ್ಣ ಮಿಷನ್ನೆ?'' ಎಂದು ಕೇಳಿದರು. ಆತನ ಹೆಸರು ಮೋಹನ ಎಂದು. ''ಹೌದು'' ಎಂದು ಅವನು ಹೇಳಿದ. ನನ್ನ ತಂದೆ, ''ಇಲ್ಲಿ ಎಲ್ಲರಿಗಿಂತಲೂ ಹಿರಿಯರಾದವರನ್ನು ನಾನು ಭೇಟಿಯಾಗಬಯಸುತ್ತೇನೆ. ಅವರನ್ನು ಭೇಟಿಯಾಗಬಹುದೆ?'' ಎಂದು ಕೇಳಿದರು.

ಮೋಹನ ಹೇಳಿದ, ''ನಾನು ಮೇಲಂತಸ್ತಿಗೆ ಹೋಗಿ ತಾಯಿಯವರನ್ನು ಕೇಳಿ ಬರುತ್ತೇನೆ.'' ಅವನು ಶ್ರೀಮಾತೆಯವರ ಬಳಿಗೆ ಹೋಗಿ ಕೇಳಿದ: ''ಅಮ್ಮಾ, ಒಬ್ಬಾತ ಸಂಭಾವಿತರ ಮಗ, ನಿಮ್ಮನ್ನು ಭೇಟಿಯಾಗಬೇಕಂತೆ.'' ಶ್ರೀಮಾತೆ ಹೇಳಿದರು, ''ನನ್ನ ಬಳಿಗೆ ಅವನನ್ನು ಕರೆದುಕೊಂಡು ಬಾ.'' ನನ್ನ ತಂದೆ ಅಲ್ಲಿಗೆ ಹೋದಾಗ ಶ್ರೀಮಾತೆ ಅವನನ್ನು ಕೇಳಿದರು, ''ನಿನ್ನ ಹೆಸರೇನು? ಊರು ಯಾವುದು? ಏನು ಕೆಲಸ ಮಾಡುತ್ತಿದ್ದೀಯಾ?'' ಇತ್ಯಾದಿ. ನನ್ನ ತಂದೆ ತಮ್ಮ ಹೆಸರು, ಊರು ಇವನ್ನೆಲ್ಲ ತಿಳಿಸಿ ದರು; ಕೆಲಸಕ್ಕಾಗಿ ಪ್ರಯತ್ನ ಮಾಡುತ್ತಿರುವುದಾಗಿಯೂ ತಿಳಿಸಿ ದರು. ಶ್ರೀಮಾತೆ ಹೇಳಿದರು: ''ನೀನು ಇಲ್ಲಿ ಕೆಲಸ ಮಾಡ ಬಲ್ಲೆಯಾ?'' ತಂದೆ ಹೇಳಿದರು: ''ನೀವು ಏನು ಕೆಲಸ ಕೊಡು ತ್ತೀರೋ, ನಾನು ಅದನ್ನೇ ಮಾಡುತ್ತೇನೆ.'' ಆಗ ಶ್ರೀಮಾತೆ ಹೇಳಿ ದರು, ''ನಾಳೆಯಿಂದ ನೀನು ಇಲ್ಲಿ ಕೆಲಸ ಆರಂಭಿಸು. ನಿನಗೆ ಸಾಮಾನು ಕೊಂಡುಕೊಳ್ಳಲು ಹಣ ಕೊಡುತ್ತಾರೆ. ನೀನು ಮೋಹನ ನನ್ನು ಜೊತೆಗೆ ಕರೆದುಕೊಂಡು ಪೇಟೆಗೆ ಹೋಗು. ಸಾಮಾನು ಕೊಂಡುಕೊಂಡು ಬಂದು, ಉಳಿದ ಹಣವನ್ನು ನೀನೇ ಇಟ್ಟುಕೋ, ಅದನ್ನು ಹಿಂದಿರುಗಿಸಬೇಕಾಗಿಲ್ಲ.'' ಶ್ರೀಮಾತೆಯವರೇ ಹೇಳಿದ್ದರಿಂದ ಶರತ್ ಮಹಾರಾಜ್ ಕೂಡ ಇದಕ್ಕೆ ಬೇರೇನನ್ನೂ ಹೇಳಲಿಲ್ಲ. ಕೆಲವು ದಿನಗಳ ನಂತರ ಶ್ರೀಮಾತೆ ನನ್ನ ತಂದೆಗೆ ಹೇಳಿದರು, ''ನೀನು ನಾಳೆಯಿಂದ ಇಲ್ಲೇ ಇದ್ದುಬಿಡು. ನಿನಗೆ ಊಟ, ಬಟ್ಟೆಬರೆ, ವಸತಿ ವ್ಯವಸ್ಥೆ ಎಲ್ಲವೂ ಇಲ್ಲೇ. ತಿಂಗಳಿಗೆ ನಿನಗೆ ಹತ್ತುರೂಪಾಯಿ ಸಂಬಳ.'' ಶ್ರೀಮಾತೆಯವರು ನನ್ನ ತಂದೆಯವರನ್ನು ಪ್ರೀತಿಯಿಂದ 'ಚಂದು' ಎಂದು ಕರೆಯುತ್ತಿದ್ದರು. ಇದಾದ ನಂತರ ಒಂದು ದಿನ ಅವರು ನನ್ನ ತಂದೆಗೆ ಹೇಳಿದರು, ''ಎಲ್ಲೆಲ್ಲಿ ಶ್ರೀರಾಮಕೃಷ್ಣರ ಜಯಂತಿ ನಡೆಯುವುದೋ ಅಲ್ಲೆಲ್ಲ ಹೋಗಿ ನೀನು 'ಉದ್ಬೋಧನ'ದ ಪುಸ್ತಕಗಳನ್ನು ಮಾರಾಟ ಮಾಡು.'' ಹಮಾಲಿಯನ್ನು ಗೊತ್ತು ಮಾಡಿದ್ದಾಯಿತು. ಅವನ ಹೆಸರು ಪಾಂಚು ಎಂದು. ನನ್ನ ತಂದೆ ಹಮಾಲಿಯ ತಲೆಯ ಮೇಲೆ ಪುಸ್ತಕಗಳ ಹೊರೆಯನ್ನು ಹೊರಿಸುತ್ತಿದ್ದರು. ನನ್ನ ತಂದೆ ಎಲ್ಲಿಗಾದರೂ ಹೋದರೆ, ಶ್ರೀಮಾತೆ ಅವರಿಗೋಸ್ಕರ ಶರಬತ್ ತಯಾರಿಸಿ ಇಡುತ್ತಿದ್ದರು. ಬಿಸಿಲಿನಲ್ಲಿ ಓಡಾಡುವ ಚಂದು ಹಿಂದಿರುಗಿದಾಗ ಅದನ್ನು ಕುಡಿಯಲಿ ಎಂದು.

ಒಂದು ದಿನ ತಂದೆಯವರು ಜಯಂತಿಯ ದಿನದಂದು ಪುಸ್ತಕ ಮಾರಾಟ ಮಾಡಲು ಬಾಂಕುರಾಗೆ ಹೊರಟಿದ್ದರು. ಶ್ರೀಮಾತೆ ಅವರಿಗೆ ಹೇಳಿದರು, ''ನೀನು ಬಾಂಕುರಾಗೆ ಹೋಗುತ್ತಿದ್ದೀಯಾ. ನಿನ್ನ ಮಗಳಿಗೆ ಹೇಳಿ ಹೋಗು, ಏನೇನು ವಸ್ತುಗಳು ಬೇಕಿದ್ದರೂ ನನ್ನ ಬಳಿಗೆ ಬರಲಿ.'' ಅದಕ್ಕೆ ಮೊದಲು ನಾವೆಲ್ಲ

ಅಂದರೆ ತಾಯಿ, ಅಣ್ಣ-ತಂಗಿಯರೆಲ್ಲ ಹಳ್ಳಿಯಲ್ಲಿ ವಾಸ ಮಾಡುತ್ತಿದ್ದೆವು. ಒಂದು ದಿನ ಶ್ರೀಮಾತೆ ನನ್ನ ತಂದೆಗೆ ಹೇಳಿದರು, ''ಚಂದು, ಈ ಬಾರಿ ನೀನು ಸೊಸೆಯನ್ನು ಮತ್ತು ಮಕ್ಕಳನ್ನು ಕಲ್ಕತ್ತೆಗೆ ಕರೆದುಕೊಂಡು ಬಾ.'' ಅನಂತರ ತಂದೆ ನಮ್ಮನ್ನು ಹಳ್ಳಿಯಿಂದ ಕರೆದುಕೊಂಡು ಬಂದರು. ವಿಧವೆಯಾಗಿದ್ದ ನನ್ನ ಅತ್ತೆ ಕೂಡ ನಮ್ಮೊಂದಿಗೆ ಬಂದರು. ನಾವು ಬಾಗ್‌ಬಜಾರಿನ ನಿವೇದಿತಾ ಲೇನ್‌ನಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದೆವು. ಕ್ರಮೇಣ ನನ್ನ ತಂದೆಯವರ ಸಂಬಳ ೧೪ ರೂಪಾಯಿಗೆ ಏರಿತು. ಶ್ರೀಮಾತೆಯವರು ಯಾವಾಗಲೂ ನಮಗೆ ಸಹಾಯ ಮಾಡುತ್ತಿದ್ದರು. ನನ್ನ ತಾಯಿ ಎಂದೂ ಸೀರೆ ಕೊಂಡುಕೊಳ್ಳಬೇಕಾಗಿ ಬರುತ್ತಿರಲಿಲ್ಲ. ಶ್ರೀಮಾತೆಯವರೇ ಅವರಿಗೆ ಸೀರೆ ಕೊಡುತ್ತಿದ್ದರು. ಕೇವಲ ತಾಯಿಗಷ್ಟೇ ಅಲ್ಲ , ನನ್ನ ತಂದೆಗೆ ಹಾಗೂ ನಮಗೆಲ್ಲ ಶ್ರೀಮಾತೆಯವರೇ ಬಟ್ಟೆಬರೆ ಎಲ್ಲವನ್ನೂ ಕೊಡುತ್ತಿದ್ದರು.

ನಾನು ಆಗ ನಿವೇದಿತಾ ಶಾಲೆಯಲ್ಲಿ ಕಲಿಯುತ್ತಿದ್ದೆ. ಶ್ರೀಮಾತೆಯವರೇ ನನ್ನನ್ನು ಅಲ್ಲಿಗೆ ಸೇರಿಸಿದ್ದರು. ಆಗ ನಿವೇದಿತಾ ಶಾಲೆಯಿದ್ದುದು ಬೋಸ್‌ಪಾರಾ ಲೇನ್‌ನಲ್ಲಿದ್ದ ಒಂದು ಹಲಸಿನ ಮರದ ಕೆಳಗಿದ್ದ ಒಂದು ಬಾಡಿಗೆ ಕಟ್ಟಡದಲ್ಲಿ. ಆಗ ಸುಧೀರಾ ಅಕ್ಕ (ಸುಧೀರಾ ಬಸು) ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದರು. ಅವರು ಒಂದು ದಿನ ಶ್ರೀಮಾತೆಯವರನ್ನು ಶಾಲೆಗೆ ಕರೆದುಕೊಂಡು ಬರಲಿದ್ದರು. ಶ್ರೀಮಾತೆಯವರಿಗೆ ವಿದ್ಯಾರ್ಥಿನಿಯರಿಂದ ಸ್ತೋತ್ರ ಪಠನ, ಹಾಡು ಇತ್ಯಾದಿಗಳನ್ನು ಕೇಳಿಸಲಿದ್ದಾರೆ. ನಾವೆಲ್ಲರೂ ಸಾಲಾಗಿ ನಿಂತಿದ್ದೆವು. ಸುಧೀರಾ ಅಕ್ಕ ಶ್ರೀಮಾತೆಯವರನ್ನು ಫೀಟನ್ ಕಾರಿನಲ್ಲಿ (ತೆರೆದ ಕಾರು) ಕರೆದುಕೊಂಡು ಬಂದರು. ಒಂದು ಕುರ್ಚಿಯಲ್ಲಿ ಶ್ರೀಮಾತೆಯವರನ್ನು ಕುಳ್ಳಿರಿಸಿದರು. ನಾವೆಲ್ಲರೂ ಅವರಿಗೆ ಪ್ರಣಾಮ ಮಾಡಿದ ನಂತರ ಸ್ತೋತ್ರ, ಹಾಡು ಇತ್ಯಾದಿಗಳನ್ನು ಹಾಡಿದೆವು. ನಡುನಡುವೆ ನಾನು ಶ್ರೀಮಾತೆಯವರ ಕಡೆಗೆ ನೋಡುತ್ತಿದ್ದೆ. ಶ್ರೀಮಾತೆಯವರು ಸನ್ನೆ ಮಾಡಿ, ಹಾಗೆ ನೋಡಬಾರದೆಂದು ತಿಳಿಸಿದರು. ಅಂದು ಶ್ರೀಮಾತೆ ಬಂದದ್ದರಿಂದ ಸುಧೀರಾ ಅಕ್ಕ ಹಾಗೂ ಶಾಲೆಯ ಅಕ್ಕಂದಿರೆಲ್ಲ ತುಂಬ ಆನಂದಗೊಂಡಿದ್ದುದನ್ನು ನಾನು ಗಮನಿಸಿದ್ದೆ.

ಒಂದು ದಿನ ನನ್ನ ಚಿಕ್ಕಪ್ಪನ ಮಗಳು ರಾಣಿ *(ನನ್ನ ಚಿಕ್ಕಪ್ಪ, ಲಾಲಮೋಹನ ದತ್ತರ ಮಗಳು ರಾಣಿ ಬಾಲಾ (ನಾಗ್). ಅವಳನ್ನು ಶ್ರೀಮಾತೆ ಪ್ರೀತಿಯಿಂದ 'ಛೋಟೋ ಖೂಕಿ' (ಸಣ್ಣ ಮಗಳು) ಎಂದು ಕರೆಯುತ್ತಿದ್ದರು. ನನ್ನನ್ನು 'ಬಡೋ ಖೂಕಿ' (ದೊಡ್ಡ ಮಗಳು) ಎಂದು ಕರೆಯುತ್ತಿದ್ದರು)* ಯೊಂದಿಗೆ ನಾನು 'ಉದ್ಬೋಧನ'ಕ್ಕೆ ಹೋಗಿದ್ದೆ. ಆಗ ಗೋಲಾಪ್-ಮಾ ಹಾಗೂ ಯೋಗಿನ್-ಮಾ ಯಾವಾಗಲೂ ಶ್ರೀಮಾತೆಯವರ ಜೊತೆಯಲ್ಲಿಯೇ ಇರುತ್ತಿದ್ದರು. ಗೋಲಾಪ್-ಮಾ ತುಂಬಾ ಕೋಪಗೊಳ್ಳುತ್ತಿದ್ದರು. ಯೋಗಿನ್-ಮಾ ಅಷ್ಟೇ ಶಾಂತ ಸ್ವಭಾವದವರು. ನಮ್ಮನ್ನು ನೋಡಿ ಗೋಲಾಪ್ ಮಾ, ''ಇಷ್ಟು ಹೊತ್ತಿಗೆ ಏಕೆ ಬಂದಿದ್ದೀಯಾ?'' ಎಂದ್ದರು. ಈ ಮಾತನ್ನು ಕೇಳಿ ಭಯಗೊಂಡು ನಾವು ಬೇಗನೆ ಮೆಟ್ಟಿಲಿಳಿದು ಓಡಿ ಹೋಗಿ ರಸ್ತೆಗಿಳಿದೆವು. ಇದ್ದಕ್ಕಿದ್ದ ಹಾಗೆ ಹಿಂದಕ್ಕೆ ತಿರುಗಿ ನೋಡಿದರೆ, ವರಾಂಡಕ್ಕೆ ಬಂದು ನಿಂತ ಶ್ರೀಮಾತೆ ನಮ್ಮನ್ನು ಕರೆಯುತ್ತ, ''ಓ ಹುಡುಗಿಯರೆ, ಕೋಪ ಮಾಡಿಕೊಳ್ಳಬೇಡಿ, ಬನ್ನಿ ಇತ್ತ'' ಎನ್ನುತ್ತಿದ್ದರು. ತಲೆದೂಗಿಸಿ, ಕೈ ನೀಡಿ, ಶ್ರೀಮಾತೆ ನಮ್ಮನ್ನು ಕರೆಯುತ್ತಿದ್ದಾರೆ. ಎರಡು, ಮೂರು ಬಾರಿ ನಾನೂ ಕೈಸನ್ನೆ ಮಾಡಿ ಹೇಳಿದೆ, ''ನಾವು ಬರಲಾರೆವು. ಗೋಲಾಪ್ ಮಾ ನಮ್ಮನ್ನು ಬಯ್ಯುತ್ತಾರೆ.'' ಅನಂತರ ತಂದೆ ಮನೆಗೆ ಮರಳಿ ಬಂದಾಗ ಹೇಳಿದ್ದರು, ಶ್ರೀಮಾತೆ ಹೀಗೆ ಹೇಳಿದ್ದರಂತೆ, ''ಗೋಲಾಪ್ ಮಾ ಹೇಗೆಲ್ಲ ಹೇಳಿಬಿಡುತ್ತಾಳೆ. ನಾನು ಆ ಹೆಣ್ಣಮಕ್ಕಳನ್ನು ಅದೆಷ್ಟು ಬಾರಿ ಕರೆದೆ, ಏನು ಮಾಡಿದರೂ ಅವರು ಬರಲಿಲ್ಲ.'' ತಂದೆ ನಮಗೆ ಹೇಳಿದ್ದರು, ''ಶ್ರೀಮಾತೆ ಅಷ್ಟೊಂದು ಕರೆದರೂ ನೀವು ಯಾಕೆ ಹೋಗಲಿಲ್ಲ?'' ಶ್ರೀಮಾತೆ ಎಂಥವರೆಂದು ಆಗ ನಾವೇನು ತಿಳಿದಿದ್ದೆವು? ಆಗ ನಾನಿನ್ನೂ ಹತ್ತು ವರ್ಷ ವಯಸ್ಸಿನ ಹುಡುಗಿ! ನನ್ನ ತಮ್ಮ (ಅಮೂಲ್ಯಚರಣ ದತ್ತ) ನಿಗೋಸ್ಕರ ಶ್ರೀಮಾತೆ ಮೂರೆಳೆಯ ಚಿನ್ನದ ಹಾರವೊಂದನ್ನು ತಯಾರಿಸಿ, ತಂದೆಗೆ ಹೇಳಿದ್ದರು, ''ಇದನ್ನು ನಿನ್ನ ಮಗನಿಗೆ ಕೊಡುತ್ತಿದ್ದೇನೆ, ಅವನು ಕತ್ತಲ್ಲಿ ಧರಿಸಲಿ.'' ನಾನು ನಡುನಡುವೆ 'ಉದ್ಬೋಧನ'ಕ್ಕೆ ಹೋಗುತ್ತಿದ್ದೆ. ಶ್ರೀಮಾತೆ ನನಗೆ ಸಾಲ ಪತ್ರೆಯಲ್ಲಿ (ಸಾಲವೃಕ್ಷದ ಎಲೆ) ಮೋಹನ್‌ಭೋಗ್ ಕೊಡುತ್ತಿದ್ದರು (ಮೋಹನ್‌ಭೋಗ್ ಎಂದರೆ ಒಂದು ಬಗೆಯ ಸಿಹಿತಿಂಡಿ). ಒಂದು ದಿನ ಶಾಲೆಯ ಹುಡುಗಿಯರೆಲ್ಲ ಪ್ರವಾಸ ಹೋಗುವವರಿದ್ದರು. ಅದಕ್ಕೆ ನಾವೆಲ್ಲ ನಾಲ್ಕಾಣೆ ಪೈಸೆ ಕೊಡಬೇಕಿತ್ತು. ನಾನು ಮನಸ್ಸಿನಲ್ಲೇ ಗಟ್ಟಿ ಮಾಡಿಕೊಂಡೆ, 'ಉದ್ಬೋಧನ'ಕ್ಕೆ ಹೋಗಿ ಶ್ರೀಮಾತೆಯವರನ್ನು ಕೇಳುವುದು ಎಂದು. ಶ್ರೀಮಾತೆಯವರನ್ನು ನಾನು 'ಠಾಕೂಮಾ' ('ಠಾಕೂರ್' ಎಂದರೆ ದೇವರು, ಒಡತಿ ಎಂದೆಲ್ಲ ಅರ್ಥವಿದೆ; ಠಾಕೂರ್ ಮಾ ಎಂಬುದೇ 'ಠಾಕೂಮಾ' ಎಂದಾಗಿದೆ) ಎಂದು ಕರೆಯುತ್ತಿದ್ದೆ. ಅಲ್ಲಿಗೆ ಹೋಗಿ, 'ಠಾಕೂಮಾ' ಎಂದು ಕರೆದಾಗ ಶ್ರೀಮಾತೆಯವರು ನಾನೇಕೆ ಕರೆಯುತ್ತಿದ್ದೇನೆ ಎಂದು ನನ್ನನ್ನು ಕೇಳಿದರು. ಪ್ರವಾಸ ಹೋಗಲು ನಾಲ್ಕಾಣೆ ಬೇಕಿತ್ತು ಎಂದಾಗ, ಪೆಟ್ಟಿಗೆಯಿಂದ ಒಂದು ನಾಲ್ಕಾಣೆ ನಾಣ್ಯವನ್ನು ತಂದು ನನ್ನ ಕೈಗಿತ್ತರು. ಅದು ತುಂಬಾ ಅಗ್ಗದ ದಿನಗಳು. ಒಂದು ಪೈಸೆಗೆ ಒಂದು ಮೊಟ್ಟೆ ಸಿಗುತ್ತಿತ್ತು. ಒಂದೊಂದು ಬಾರಿ ನನ್ನ ತಾಯಿ 'ಉದ್ಬೋಧನ'ಕ್ಕೆ ಹೋದಾಗ, ನಾನು ಹಾಗೂ ತಮ್ಮ ಅಮೂಲ್ಯ ಅವರೊಂದಿಗೆ ಅಲ್ಲೇ ತಂಗುತ್ತಿದ್ದೆವು. ತಾಯಿ ಒಬ್ಬಳೇ ಅಲ್ಲಿಗೆ ಹೋಗಿದ್ದಾಗ, ಶ್ರೀಮಾತೆ ಅವರ ಬಳಿ ನನ್ನ, ಅಮೂಲ್ಯನ ಬಗ್ಗೆ ವಿಚಾರಿಸುತ್ತಿದ್ದರು.

ಸಾಮಾನ್ಯವಾಗಿ ನಾನು ಶಾಲೆಯಿಂದ ಹಿಂದಿರುಗಿದ ನಂತರ,

ಬಲರಾಮ ಬಾಬುವಿನ ಮನೆಗೆ ಹೋಗಿ, ಅಲ್ಲಿನ ಹೆಣ್ಣುಮಕ್ಕಳೊಂದಿಗೆ ಆಟವಾಡುತ್ತಿದ್ದೆ. ಒಂದು ದಿನ ನಾನು 'ಉದ್ಬೋಧನ'ಕ್ಕೆ ಹೋಗಿದ್ದಾಗ, ಅಲ್ಲಿ ರಾಧು ಅಕ್ಕ, ಮಾಕು ಇವರೆಲ್ಲ ಬಳೆ ಮಾರುವವನ ಬಳಿಗೆ ಹೋಗಿ ಬಳೆ ತೊಟ್ಟುಕೊಳ್ಳುತ್ತಿದ್ದರು. ಶ್ರೀಮಾತೆ ನನ್ನ ಎರಡೂ ಕೈಗಳಿಗೆ ಆರಾರು – ಒಟ್ಟು ಹನ್ನೆರಡು ಬಳೆಗಳನ್ನು ತೊಡಿಸಲು ಹೇಳಿದರು. ಶ್ರೀಮಾತೆ ನನಗೆ ಅವರ ಬಿಳಿಕೂದಲನ್ನು ಕೀಳಲು ಹೇಳುತ್ತಿದ್ದರು. ನಾನು ಅವರ ಬಳಿ ಕುಳಿತು, ಅವರ ಬಿಳಿಕೂದಲನ್ನು ಕಿತ್ತುಕೊಡುತ್ತಿದ್ದೆ. ಶ್ರೀಮಾತೆಯವರದು ತುಂಬ ದಟ್ಟವಾದ, ಗುಂಗುರು ಕೂದಲು; ನಡುನಡುವೆ ಹಣ್ಣಾಗಿತ್ತು, ನಡುವಿನವರೆಗೂ ದೀರ್ಘವಾಗಿತ್ತು. ಕೂದಲು ಕಿತ್ತ ನಂತರ ನನಗೆ ಅವರು ಒಂದು ದೊಡ್ಡಗಾತ್ರದ ಅಮೃತಿ (ಒಂದು ಬಗೆಯ ಜಹಾಂಗೀರದಂಥ ಸಿಹಿತಿಂಡಿ) ಅಥವಾ 'ಸಂದೇಶ' (ಇದೂ ಸಿಹಿತಿಂಡಿ) ಕೊಡುತ್ತಿದ್ದರು. ಒಂದು ಸಲ ಢಾಕಾದಿಂದ ಯಾರೋ ಒಬ್ಬರು ಭಕ್ತರು ಶ್ರೀಮಾತೆಯವರಿಗೆ ಅಮೃತಿ ಕಳುಹಿಸಿಕೊಟ್ಟಿದ್ದರು. ಒಂದೊಂದು ಅಮೃತಿ ಕೂಡ ಒಂದು ಪಾವು ಭಾರವಿತ್ತು. ಶ್ರೀಮಾತೆ ಒಂದು ಅಮೃತಿಯನ್ನು ನನ್ನ ಕೈಗೆ ಕೊಟ್ಟು, ''ಇದನ್ನು ನಿನ್ನ ತಾಯಿಗೆ ಕೊಡು'' ಎಂದರು. ಆಗ ನಾವು ಗಿರೀಶಬಾಬುವಿನ ಮನೆಯ ಎದುರಿನ ಮನೆಯಲ್ಲಿ ಬಾಡಿಗೆಗೆ ಇದ್ದೆವು. ಅಮೃತಿಯನ್ನು ಕೈಯಲ್ಲಿ ಹಿಡಿದುಕೊಂಡು ನಾನು ಹೋಗುತ್ತಿದ್ದೆ. ಅಷ್ಟರಲ್ಲಿ ಗಿರೀಶಬಾಬುವಿನ ಮನೆಯ ನಾಯಿ ನನ್ನ ಬಳಿ ಬಂದು, ಮೇಲಕ್ಕೆ ನೆಗೆದು ನನ್ನ ಕೈಯಿಂದ ಅಮೃತಿಯನ್ನು ಕಚ್ಚಿಕೊಂಡು ಓಡಿಹೋಯಿತು. ನಾನು ಓಡಿಹೋಗಿ ನನ್ನ ತಾಯಿಗೆ ನಡೆದುದನ್ನೆಲ್ಲ ಹೇಳಿದೆ. ನನ್ನ ತಾಯಿ (ಚಪಲಾಸುಂದರಿ ದತ್ತ) ಬೇಗನೆ ಓಡಿಬಂದು, ರಸ್ತೆಯಲ್ಲಿ ಬಿದ್ದಿದ್ದ ಒಂದೆರಡು ತುಣುಕುಗಳನ್ನು ಎತ್ತಿಕೊಂಡು, ಬಾಯಿಗೆ ಹಾಕಿಕೊಂಡರು. ಶ್ರೀಮಾತೆ ಕಳುಹಿಸಿಕೊಟ್ಟಿದ್ದಲ್ಲವೆ! ನಾನು ಗಿರೀಶಬಾಬುವಿನ ಮನೆಗೆ ಹೋಗಿ, ನನ್ನ ಕೈಯಿಂದ ಅವರ ನಾಯಿ ಅಮೃತಿ ಕಸಿದುಕೊಂಡು ತಿಂದ ವಿಷಯವನ್ನು ಒಬ್ಬರಿಗೆ ಹೇಳಿದೆ. ಅದನ್ನು ಕೇಳಿದ ಅವರು, ''ನಾಯಿ ತಿಂದು ಬಿಟ್ಟಿತಲ್ಲ, ಇನ್ನೇನು ಮಾಡಲಾದೀತು?'' ಎಂದರು. ಆಗ ಅದು ಗಿರೀಶ ಬಾಬುವಿನ ಮನೆ ಎಂದು ನನಗೆ ನಿಜಕ್ಕೂ ತಿಳಿದಿರಲಿಲ್ಲ, ಅನಂತರ ತಿಳಿದುಬಂತು.

ನನ್ನ ತಂದೆಯವರಿಗೆ ಶ್ರೀಮಾತೆಯವರಿಂದ ಬಹಳ ಮೊದಲೇ ಮಂತ್ರದೀಕ್ಷೆಯಾಗಿತ್ತು. ಒಂದು ದಿನ ಶ್ರೀಮಾತೆಯವರಿಂದ ದೀಕ್ಷೆ ಪಡೆದಂತೆ ನನ್ನ ತಾಯಿಗೆ ಕನಸು ಬಿತ್ತು. ಇದನ್ನು ನನ್ನ ತಂದೆಗೆ ಅವರು ತಿಳಿಸಿದರು. ತಂದೆ ಶ್ರೀಮಾತೆಯವರ ಬಳಿಗೆ ಹೋಗಿ ಈ ವಿಷಯವನ್ನು ತಿಳಿಸಿದರು. ಶ್ರೀಮಾತೆ ನಗುತ್ತ, ''ಸೊಸೆಗೆ (ಅಂದರೆ ನನ್ನ ತಾಯಿಗೆ) ಹೇಳು, ಒಂದು ಹೊಸ ಕೆಂಪಂಚಿನ ಸೀರೆ ಉಟ್ಟುಕೊಂಡು ನನ್ನ ಬಳಿಗೆ ಬರಬೇಕು ಅಂತ. ಐದು ಅಳಲೆಕಾಯಿ ಕೂಡ ತರಲಿ'' ಎಂದರು. ಸೀರೆಯನ್ನು ಕೂಡ ಬಹುಶಃ ಶ್ರೀಮಾತೆಯವರೇ ನನ್ನ ತಂದೆಯ ಮೂಲಕ ಕಳುಹಿಸಿಕೊಟ್ಟಿದ್ದರು. ಅದೇ ರೀತಿ ನನ್ನ ತಾಯಿ ಮರುದಿನ 'ಉದ್ಬೋಧನ'ಕ್ಕೆ ಹೋಗಿದ್ದರು. ದೀಕ್ಷೆಗೆ ಮುನ್ನ ನನ್ನ ತಾಯಿ ಶ್ರೀಮಾತೆಯವರಿಗೆ, ಕನಸಿನಲ್ಲಿ ಅವರು ಪಡೆದಿದ್ದ ಮಂತ್ರವನ್ನು ಹೇಳಿದರು. ಅದನ್ನು ಕೇಳಿದ ಶ್ರೀಮಾತೆ, ''ಕನಸಿನಲ್ಲಿ ನಿನಗೆ ಸಿಕ್ಕಿದ ಮಂತ್ರವನ್ನು ಮೊದಲು ಜಪ ಮಾಡು; ಅನಂತರ ನಾನು ಕೊಟ್ಟ ಮಂತ್ರವನ್ನು ಜಪಿಸು'' ಎಂದಿದ್ದರು.

ನನ್ನ ತಾಯಿ ಅನೇಕ ಬಾರಿ ಕನಸಿನಲ್ಲಿ ಇಲಿಷ್ ಮೀನು, ಪೋನಾ ಮೀನುಗಳನ್ನು ಕಾಣುತ್ತಿದ್ದರು. ಅದನ್ನು ಕೇಳಿದ ನನ್ನ ತಂದೆ ಶ್ರೀಮಾತೆಯವರಿಗೆ ಹೇಳಿದ್ದರು, ''ಅಮ್ಮಾ, ನಿಮ್ಮ ಸೊಸೆ ಕನಸಿನಲ್ಲಿ ಅನೇಕ ಬಾರಿ ಮೀನುಗಳನ್ನು ನೋಡುತ್ತಾಳೆ.'' ಶ್ರೀಮಾತೆ ಅದನ್ನು ಕೇಳಿ ನಗುತ್ತ, ''ಇಂಥ ಕನಸುಗಳನ್ನು ನೋಡುವುದು ತುಂಬ ಒಳ್ಳೆಯದು. ಮೀನಿನ ಚರ್ಮದ ಹಾಗೆ ತುಂಬಾ ಹಣ ಬಂದೀತು'' ಎಂದರು.

ನನ್ನ ತಂದೆ ಶ್ರೀಮಾತೆಯವರಿಗೆ, ''ನನ್ನ ಮಕ್ಕಳಿಗೆ ಅನ್ನ-ಬಟ್ಟೆಗೆ ವಿಶೇಷ ಅಭಾವವೇನೂ ಆಗದ ಹಾಗೆ ನೀವು ಆಶೀರ್ವಾದ ಮಾಡಿ'' ಎಂದಿದ್ದರು. ಅದಕ್ಕೆ ಶ್ರೀಮಾತೆ, ''ನಿನ್ನ ಮಕ್ಕಳಿಗೆ ನಾನು ಯಾವಾಗಲೂ ಆಶೀರ್ವಾದ ಮಾಡುತ್ತೇನೆ. ಅವರಿಗೆ ಎಂದಿಗೂ ಅನ್ನ ಬಟ್ಟೆಯ ಅಭಾವ ವಿಶೇಷವಾಗಿ ಉಂಟಾಗದು ಎಂದು ನಾನು ಆಶೀರ್ವಾದ ಮಾಡುತ್ತೇನೆ'' ಎಂದರು. ಒಂದು ಸಲ ಶ್ರೀಮಾತೆ ನನ್ನ ತಂದೆಯವರಿಗೆ ಒಂದಿಷ್ಟು ಅಕ್ಕಿಯನ್ನು ಕೊಟ್ಟು, ''ಈ ಅಕ್ಕಿಯನ್ನು ನಿನ್ನ ಮನೆಯ ಅಕ್ಕಿಯ ಪಾತ್ರೆಗೆ ಹಾಕು. ನಿನಗೆಂದಿಗೂ ಅಕ್ಕಿಯ ಅಭಾವವುಂಟಾಗದು'' ಎಂದಿದ್ದರು.

ಶ್ರೀಮಾತೆ ಒಂದು ಬಾರಿ ನನ್ನ ತಂದೆಯವರಿಗೆ, ಅವರ ಅತೀವ ಒತ್ತಾಯದ ಮೇರೆಗೆ ತಮ್ಮ ನೈಜ ಸ್ವರೂಪವನ್ನು — ಅಂದರೆ ಜಗದ್ಧಾತ್ರೀ ರೂಪವನ್ನು ತೋರಿಸಿಕೊಟ್ಟಿದ್ದರು. ಅನಂತರ ಶ್ರೀಮಾತೆ, ''ನಿನಗೆ ಈಗ ತೋರಿಸಿಕೊಟ್ಟ ರೂಪದ ಬಗ್ಗೆ ನನ್ನ ಜೀವವಿರುವ ತನಕವೂ ಯಾರಿಗೂ ಹೇಳಬೇಡ'' ಎಂದಿದ್ದರು. ನನ್ನ ತಂದೆ ಶ್ರೀಮಾತೆಯವರ ದೇಹತ್ಯಾಗವಾದ ನಂತರವಷ್ಟೇ ಈ ವಿಷಯವನ್ನು ನನ್ನ ತಾಯಿಗೆ ತಿಳಿಸಿದ್ದರು. ಜಗದ್ಧಾತ್ರೀ ಮೂರ್ತಿಯ ಎರಡೂ ಪಕ್ಕ ಜಯೆ ಹಾಗೂ ವಿಜಯೆಯರ ಮೂರ್ತಿ ಇರುತ್ತದೆ. ಶ್ರೀಮಾತೆ, ''ಗೋಲಾಪ್ ಹಾಗೂ ಯೋಗಿನ್ ನನ್ನ ಜಯೆ-ವಿಜಯೆಯರು'' ಎಂದಿದ್ದರು. ತಂದೆ ತೀರಿಕೊಂಡ ನಂತರ, ನಾನು ನನ್ನ ತಾಯಿಯಿಂದ ಈ ವಿಷಯವನ್ನು ತಿಳಿದಿದ್ದೆ. ಶ್ರೀಮಾತೆಯವರು ಜಯರಾಮಬಾಟಿಗೆ ಹೋಗುತ್ತಿದ್ದಾಗ ಒಂದೊಂದು ಸಲ ನನ್ನ ತಂದೆಯವರನ್ನು ಕರೆದುಕೊಂಡು ಹೋಗುತ್ತಿದ್ದರು. ಶ್ರೀಮಾತೆಯವರನ್ನು ಜಯರಾಮಬಾಟಿಗೆ ತಲುಪಿಸಿ, ಬಳಿಕ ಕಲ್ಕತ್ತೆಗೆ ಬಂದು, ಅವರು ಜಯರಾಮಬಾಟಿ ತಲುಪಿದ ವಿಷಯವನ್ನು ಶರತ್ ಮಹಾರಾಜರಿಗೆ,

ತಿಳಿಸುತ್ತಿದ್ದರು. ಒಂದು ಸಲ ತಂದೆಯವರ ಜೊತೆಗೆ ನಾನು ಈ ರೀತಿ ಜಯರಾಮಬಾಟಿಗೆ ಹೋಗಿದ್ದೆ. ರಾಧು ಅಕ್ಕ, ಮಾಕು ಅಕ್ಕ ಇವರೊಂದಿಗೆ ಎತ್ತಿನ ಗಾಡಿಯಲ್ಲಿ ಜಯರಾಮಬಾಟಿಗೆ ಹೋಗಿ ತಲುಪಿದ್ದೆ ಎಂದು ನನ್ನ ನೆನಪು.

ಬಾಗ್‌ಬಜಾರಿನಲ್ಲಿನ ನಮ್ಮ ಮನೆಯಲ್ಲಿ ನಾವು ಪೂಜೆ ಮಾಡುವ ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯವರ ಭಾವ ಚಿತ್ರಕ್ಕೆ ಶ್ರೀಮಾತೆಯವರೇ ಪೂಜೆ ಮಾಡಿದ್ದರು. 'ಉದ್ಬೋಧನ' ದಲ್ಲಿ ನಡೆಯುತ್ತಿದ್ದ ದುರ್ಗಾಪೂಜೆಯ ಸಮಯದಲ್ಲಿ ನಾವೆಲ್ಲರೂ ನಾಲ್ಕೂ ದಿನ ಅಲ್ಲೇ ಪ್ರಸಾದ ಭೋಜನ ಪಡೆಯುತ್ತಿದ್ದೆವು. ಮಹಾಷ್ಟಮಿಯ ದಿನ ಶ್ರೀಮಾತೆಯವರು ಕುಮಾರಿ ಪೂಜೆ ಮಾಡುತ್ತಿದ್ದರು. ನಾವು ನಿಂತೇ ಎಲ್ಲವನ್ನೂ ನೋಡುತ್ತಿದ್ದೆವು. ಆಗ ಎಷ್ಟು ಆನಂದವಾಗುತ್ತಿತ್ತು! ನಾವೆಲ್ಲರೂ ಅಷ್ಟಮಿಯ ದಿನದಂದು ಶ್ರೀಮಾತೆಯವರ ಪಾದಗಳಿಗೆ ಹೂಗಳನ್ನು ಅರ್ಪಿಸಿ ಪೂಜೆ ಮಾಡುತ್ತಿದ್ದೆವು. ಒಂದು ಬಾರಿ ನನ್ನ ತಾಯಿ ಅಷ್ಟಮಿಯ ದಿನದಂದು ಶ್ರೀಮಾತೆಯವರ ಪಾದಗಳಿಗೆ ಗಂಗಾ ಜಲವನ್ನು ಹಾಕಿ ತೊಳೆಯಹೊರಟಿದ್ದರು. ಆಗ ಶ್ರೀಮಾತೆ ಹೇಳಿದರು, ''ಸೊಸೆಯಮ್ಮ, ನೀನೇನು ಮಾಡುತ್ತಿದ್ದೀಯಾ? ಗಂಗಾ ಜಲದಿಂದ ಕಾಲು ತೊಳೆಯುತ್ತಿರುವೆಯಾ?'' ಆಗ ನನ್ನ ತಾಯಿಗೆ ತುಂಬಾ ನಾಚಿಕೆಯುಂಟಾಯಿತು, ಅವರಿಗೆ ಗೊತ್ತಾಗಲಿಲ್ಲ ಎಂದು ಹೇಳಿದರು. ಅನಂತರ ತಾಯಿ ಶ್ರೀಮಾತೆಯವರ ಪಾದಗಳಿಗೆ ಹೂಗಳನ್ನರ್ಪಿಸಿ ಪೂಜೆ ಮಾಡಿದರು.

ಶ್ರೀಮಾತೆಯವರ ಎರಡೂ ಕೈಗಳಲ್ಲಿ ಬಂಗಾರದ ಬಳೆಗಳಿದ್ದವು. ತೆಳುವಾದ ಕೆಂಪಂಚಿನ ಸೀರೆಯನ್ನು ಅವರು ಉಡುತ್ತಿದ್ದರು. ಎರಡೂ ಪಾದಗಳ ಹೆಬ್ಬೆರಳಿನಲ್ಲಿ ಒಂದೊಂದು ಕಾಲುಂಗುರವಿತ್ತು. ಅನೇಕ ಬಾರಿ ಶ್ರೀಮಾತೆಯವರು ಕಾಲುನೀಡಿ ಕುಳಿತುಕೊಳ್ಳುತ್ತಿದ್ದುದನ್ನು ನಾನು ಕಂಡಿದ್ದೇನೆ. ಇಳಿವಯಸ್ಸಿನಲ್ಲಿ ಅವರು ವಾತದ ಕಾರಣಕ್ಕಾಗಿ ಹೀಗೆ ಕುಳಿತುಕೊಳ್ಳುತ್ತಿದ್ದರು ಎಂದು ನಾನು ಕೇಳಿದ್ದೇನೆ.

ನಾವು ಬಾಡಿಗೆ ಮನೆಯಲ್ಲಿದ್ದಾಗ, ಆ ಮನೆಯ ಮಾಲಿಕ, ನಾವು ಆಟವಾಡಲು ಬಿಡುತ್ತಿರಲಿಲ್ಲ. ಕೆಲಸದವರಿಗೆ ನಮ್ಮ ಆಟಿಕೆಗಳನ್ನೆಲ್ಲ ಹೊರಗೆ ಬಿಸಾಡುವಂತೆ ಹೇಳುತ್ತಿದ್ದ. ಆಗಾಗ ಹೀಗೆರಿನಡೆಯುತ್ತಿತ್ತು. ಒಂದು ದಿನ ನನ್ನ ತಂದೆ ಶ್ರೀಮಾತೆಯವರಿಗೆ ಈ ವಿಷಯವನ್ನು ತಿಳಿಸಿದರು. ಶ್ರೀಮಾತೆ ನನ್ನ ತಂದೆಗೆ, ''ನೀನು ಈಗ ಸೊಸೆ (ಅಂದರೆ ನನ್ನ ತಾಯಿ) ಹಾಗೂ ಮಕ್ಕಳನ್ನು ಹಳ್ಳಿಗೆ ಕರೆದುಕೊಂಡು ಹೋಗಿ, ಅಲ್ಲಿ ಬಿಟ್ಟು ಬಾ'' ಎಂದರು. ಹಾಗೆ ನಾವು ಹಳ್ಳಿಗೆ ಹೋದೆವು. ಅನಂತರ ಶ್ರೀಮಾತೆ ಶರತ್ ಮಹಾರಾಜರಿಗೆ ಹೇಳಿದರು: ''ಅವರ ತಲೆ ಮೇಲೊಂದು ಸೂರು ತಯಾರುಮಾಡಿಕೊಡು, ಶರತ್.'' ಶರತ್ ಮಹಾರಾಜ್ ಬಾಗ್ ಬಜಾರಿನ ಬೋಸ್‌ಪಾರಾ ಲೇನ್‌ನಲ್ಲಿ ಏಳೂವರೆ ಕಾಠಾ (೧ ಕಾಠಾ = ೭೨೦ ಚದರ ಅಡಿ ಅಳತೆ) ಜಮೀನನ್ನು ಆಂದುಲ್ ಮಾಡಿಯ ಜಮೀನ್ದಾರರಿಂದ ಖರೀದಿಸಿ ಕೊಟ್ಟರು. ಮೂರೂವರೆ ಕಾಠಾ ಜಮೀನಿನಲ್ಲಿ ಮನೆಯನ್ನು ನಿರ್ಮಿಸಲಾಯಿತು. ಚಾವಣಿಯ ಟಿನ್ ಕೂಡಾ ಶ್ರೀಮಾತೆಯವರ ಆದೇಶದಂತೆ ಶರತ್ ಮಹಾರಾಜರೇ ಖರೀದಿಸಿಕೊಟ್ಟರು. ನಾಲ್ಕು ಕಾಠಾ ಜಮೀನಿನಲ್ಲಿ ತೋಟ ನಿರ್ಮಿಸಿದರು. ಅಲ್ಲಿ ನಾನಾ ಬಗೆಯ ಗಿಡಗಳನ್ನು ನೆಡಲಾಯಿತು. ಅದರ ನಡುವೆ ಸಾಸಿವೆಯ ಗಿಡಗಳೂ ಇದ್ದವು. ಒಂದು ದಿನ ಮನೆ ನೋಡುವುದಕ್ಕೆಂದು ಬಂದ ಶರತ್ ಮಹಾರಾಜ್, ''ಸಾಸಿವೆ ಗಿಡವನ್ನೇಕೆ ಹಾಕಿದ್ದೀರಿ? ಮನೆಯಿರುವ ಜಮೀನಿನಲ್ಲಿ ಸಾಸಿವೆ ಗಿಡ ಹಾಕಬಾರದು'' ಎಂದಿದ್ದರು. ಕೂಡಲೇ ನನ್ನ ತಂದೆ ಅವುಗಳನ್ನು ಕಿತ್ತು ಎಸೆದುಬಿಟ್ಟರು.

ನನ್ನ ಅಜ್ಜನ ಗಂಟಲಲ್ಲಿ ಹುಣ್ಣಾಗಿತ್ತು. ತಂದೆ ಈ ವಿಷಯವನ್ನು ಶ್ರೀಮಾತೆಯವರಿಗೆ ತಿಳಿಸಿದರು. ಕೂಡಲೇ ಶ್ರೀಮಾತೆ ತಂದೆಗೆ, ''ನಿನ್ನ ತಂದೆಯನ್ನು ಕಲ್ಕತ್ತೆಗೆ ಕರೆದುಕೊಂಡು ಬಾ. ಇಲ್ಲಿ ಕಂಜಿಲಾಲ್ (ಜ್ಞಾನೇಂದ್ರನಾಥ), ದುರ್ಗಾಪದ (ಘೋಷ್), ಶ್ಯಾಮಾಪದ (ಮುಖ್ಯೋಪಾಧ್ಯಾಯ)ರಂಥ ದೊಡ್ಡ ದೊಡ್ಡ ಡಾಕ್ಟರರಿದ್ದಾರೆ. ಇಲ್ಲೇ ಅವರಿಗೆ ಚಿಕಿತ್ಸೆ ಕೊಡಿಸು'' ಎಂದರು. ಅಂತೆಯೇ ನನ್ನ ಅಜ್ಜನನ್ನು ಕಲ್ಕತ್ತೆಗೆ ಕರೆದುಕೊಂಡು ಬಂದರು. ದುರ್ಗಾಪದ ಡಾಕ್ಟರ್ ಪರೀಕ್ಷೆ ಮಾಡಿ, ''ಕ್ಯಾನ್ಸರ್ ಆಗಿದೆ'' ಎಂದರು. ಅವರಿಗಾಗಿ ಶ್ರೀಮಾತೆ ಎಷ್ಟೊಂದು ಹಣ್ಣುಹಂಪಲು ಕಳುಹಿಸುತ್ತಿದ್ದರು! ಆದರೆ ಅಜ್ಜ ಕೆಲವು ದಿನಗಳಲ್ಲೇ ತೀರಿಕೊಂಡರು. ಅವರು ತೀರಿಕೊಂಡಾಗ ಶ್ರೀಮಾತೆ ಜಯರಾಮಬಾಟಿಯಲ್ಲಿದ್ದರು. ತಂದೆ ಶ್ರೀಮಾತೆಯವರಿಗೆ ಪತ್ರ ಬರೆದು ವಿಷಯ ತಿಳಿಸಿದರು. ಶ್ರೀಮಾತೆಯವರು ಅಜ್ಜನ ಮರಣದ ವಾರ್ತೆ ತಿಳಿದು, ನನ್ನ ತಂದೆಗೆ ಒಂದು ಪತ್ರ ಬರೆದಿದ್ದರು. ನನ್ನ ಸಣ್ಣ ತಮ್ಮ ಕಾರ್ತಿಕನು ಶ್ರೀಮಾತೆಯವರ ಪತ್ರಗಳನ್ನೆಲ್ಲ ನಮ್ಮ ಬಾಗ್‌ಬಜಾರಿನ ಮನೆಯಲ್ಲಿ ಸಂಗ್ರಹಿಸಿ ಇಟ್ಟಿದ್ದಾನೆ.

ಶರತ್ ಮಹಾರಾಜ್ ಒಂದು ದಿನ ನನ್ನ ತಾಯಿಗೆ ಹೇಳಿದ್ದರು: ''ನಾವು ಆಗಾಗ ಕಾಲಿಯಾ, ಕೋರಮಾ (ಮೀನು–ಮಾಂಸದ ಪಲ್ಯಪದಾರ್ಥಗಳು; ಅಧಿಕ ಮಸಾಲೆ ಹಾಕಿ ಮಾಡುತ್ತಾರೆ) ಇವನ್ನೆಲ್ಲ ತಿನ್ನುತ್ತೇವೆ; ಈ ಬಾರಿ ನಿಮ್ಮ ಊರಿನ ಅಡುಗೆ ತಿನ್ನಬೇಕೆನಿಸುತ್ತದೆ.'' ನನ್ನ ತಾಯಿ ಇಲಿಷ್ ಮೀನಿನ ಭಾಪಾ (ಆವಿಯಲ್ಲಿ ತಯಾರಿಸಿದ ಪದಾರ್ಥ) ಹಾಗೂ ಇಲಿಷ್ ಮೀನಿನ ತಲೆ ಹಾಗೂ ಮಸೂರ ಬೇಳೆಯಿಂದ ಮಾಡಿದ ಅಡುಗೆ ತಯಾರಿಸಿ, 'ಉದ್ಬೋಧನ'ಕ್ಕೆ ಕಳುಹಿಸಿಕೊಟ್ಟರು. ಮುಂದೆ ಅದೇ ರೀತಿ ಅವರು ನಡುನಡುವೆ ಅಡುಗೆ ಮಾಡಿ, 'ಉದ್ಬೋಧನ'ಕ್ಕೆ ಕಳುಹಿಸಿಕೊಡುತ್ತಿದ್ದರು. ಒಂದು ದಿನ ಇದ್ದಕ್ಕಿದ್ದಂತೆ ಬಿಸಿಯಾದ ಡಾಲ್‌ನ ಪಾತ್ರೆಗೆ ಇನ್ನೊಂದು ಮಡಕೆ ಬಿದ್ದು, ನನ್ನ ತಾಯಿಯ ದೇಹವೆಲ್ಲ ಡಾಲ್ ಚೆಲ್ಲಿದ್ದರಿಂದ ಗುಳ್ಳೆಯೆದ್ದಿತು. ತಾಯಿ ನೋವು ತಡೆಯಲಾರದೆ ಚೀರತೊಡಗಿದ್ದರು. ನನ್ನ ತಂದೆ ವೇಗವಾಗಿ 'ಉದ್ಬೋಧನ'ಕ್ಕೆ ಹೋಗಿ, ಶ್ರೀಮಾತೆಯವರಿಗೆ ಎಲ್ಲವನ್ನೂ

ತಿಳಿಸಿದರು. ಕೂಡಲೇ ಶ್ರೀಮಾತೆ ಒಂದು ತಟ್ಟೆಯಲ್ಲಿ ಸಾಸಿವೆ ಎಣ್ಣೆಯನ್ನು ತುಂಬಿ, ಮಂತ್ರ ಜಪ ಮಾಡಿ, ಗುಳ್ಳೆಯೆದ್ದ ಜಾಗಕ್ಕೆ ಹಚ್ಚಲು ಹೇಳಿ, ನನ್ನ ತಂದೆಗೆ ಅದನ್ನು ಕೊಟ್ಟರು. ಅದನ್ನು ಹಚ್ಚಿದ ನಂತರವೇ ನನ್ನ ತಾಯಿಗೆ ನೋವು ಕಡಿಮೆಯಾಯಿತು.

ನನ್ನ ತಂದೆಯವರಿಗೆ ಶ್ರೀಮಾತೆ ತಮ್ಮ ಕೂದಲು, ಉಗುರು ಹಾಗೂ ಬಟ್ಟೆಬರೆ ಇವನ್ನು ಕೊಟ್ಟಿದ್ದರು. ನನ್ನ ತಾಯಿ ಇವುಗಳಿಗೆ ಪ್ರತಿದಿನವೂ ಪೂಜೆ ಮಾಡುತ್ತಿದ್ದರು. ನಾನು ಕೂಡ ತಾಯಿಯಿಂದ ಈ ಎಲ್ಲ ವಸ್ತುಗಳಿಂದ ಕೆಲವನ್ನು ತೆಗೆದುಕೊಂಡು ಬಂದು, ಈಗಲೂ ಅವುಗಳಿಗೆ ಪೂಜೆ ಮಾಡುತ್ತಿದ್ದೇನೆ.

ಒಬ್ಬ ಭಕ್ತ ರಾಧು ಅಕ್ಕನಿಗೆ ೧೫-೧೬ ರೂಪಾಯಿ ಮೊತ್ತದ ಉಪ್ಪಿನಕಾಯಿಯನ್ನು ಉಪಯೋಗಿಸಲು ಕೊಟ್ಟಿದ್ದ. ಅದರಲ್ಲಿ ಅರ್ಧವನ್ನು ಶ್ರೀಮಾತೆ ನನ್ನ ತಂದೆಗೆ ಕೊಟ್ಟು, ''ಇದನ್ನು ಸೊಸೆಗೆ ಕೊಡು, ಅವಳು ಉಪಯೋಗಿಸಲಿ. ಇಷ್ಟೊಂದು ಉಪ್ಪಿನಕಾಯಿಯನ್ನು ಇನ್ನೇನು ಮಾಡಲಿ?'' ಎಂದರು.

ಒಂದು ದಿನ ಹಠಾತ್ತನೆ ತಂದೆ ಹೇಳಿದರು, ಶ್ರೀಮಾತೆಯವರ ದೇಹಾರೋಗ್ಯ ತುಂಬಾ ಕೆಟ್ಟು ಹೋಗಿದೆ ಎಂದು. ಅಂದು ರಾತ್ರಿಯಿಡೀ ಅವರು 'ಉದ್ಬೋಧನ'ದಲ್ಲೇ ಇದ್ದರು. ಬೆಳಿಗ್ಗೆ ಬಂದು ಸುದ್ದಿ ನೀಡಿದರು: ''ಶ್ರೀಮಾತೆ ದೇಹತ್ಯಾಗ ಮಾಡಿ ದ್ದಾರೆ.'' ನಾವು ಕೂಡಲೇ 'ಉದ್ಬೋಧನ'ದತ್ತ ಧಾವಿಸಿದೆವು. ಹೋಗಿ ನೋಡಿದರೆ, ದೇವರಕೋಣೆಯಲ್ಲಿ ಶ್ರೀಮಾತೆಯವರ ದೇಹವನ್ನು ಮಲಗಿಸಿದ್ದರು. ಭಕ್ತರೆಲ್ಲ ಗುಂಪುಗುಂಪಾಗಿ ಬರು ತ್ತಿದ್ದರು. ಸಾಧುಗಳೂ ಬರುತ್ತಿದ್ದರು. ಅವರೆಲ್ಲ ಪ್ರಣಾಮ ಮಾಡು ತ್ತಿದ್ದರು. ನಾನೂ ಅವರಿಗೆ ಪ್ರಣಾಮ ಮಾಡಿ, ಮರಳಿದೆ. ಆಗ ನನಗೆ ೧೪ ವರ್ಷ ವಯಸ್ಸು , ೨ ತಿಂಗಳು; ನಿವೇದಿತಾ ಶಾಲೆ ಯಲ್ಲಿ ೬ನೇ ತರಗತಿಯ ವಿದ್ಯಾರ್ಥಿನಿ. ಶ್ರೀಮಾತೆ ದೇಹತ್ಯಾಗ ಮಾಡಿದುದು ೧೯೨೦ನೇ ಇಸವಿಯ ಜುಲೈ ತಿಂಗಳಿನಲ್ಲಿ. ೧೯೨೧ರ ವೈಶಾಖ ಮಾಸದಲ್ಲಿ ನನ್ನ ವಿವಾಹವಾಯಿತು.

ನಾನಿನ್ನೂ ಆಗ ಚಿಕ್ಕವಳು. ಶ್ರೀಮಾತೆ ಒಂದು ದಿನ ನನ್ನ ತಂದೆಗೆ ಹೇಳಿದರು: ''ಚಂದು, ದೊಡ್ಡ ಮಗಳಿಗೆ (ಅಂದರೆ, ನನಗೆ) ಮದುವೆ ಮಾಡಬೇಡ. ಅವಳಿಗೆ ನಿವೇದಿತಾ ಶಾಲೆಯಲ್ಲಿ ವಿದ್ಯಾಭ್ಯಾಸ ನೀಡು.'' ಆಗ ನನ್ನ ತಂದೆ ಹೇಳಿದ್ದರು: ''ನನಗೆ ತಂದೆ, ಅಕ್ಕ ಇವರೆಲ್ಲ ಇದ್ದಾರೆ, ಅವರೆಲ್ಲ ಏನು ಹೇಳುವರೋ ನೋಡುತ್ತೇನೆ.'' ಅಂತೂ ಕೊನೆಗೆ ನನ್ನ ತಂದೆ ನನಗೆ ಮದುವೆ ಮಾಡಿಸಿಬಿಟ್ಟರು. ಆಗ ನನಗೆ ಸುಮಾರು ಹದಿನೈದು ವರ್ಷ ವಯಸ್ಸು. ನಿವೇದಿತಾ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಓದು ತ್ತಿದ್ದೆ. ಮದುವೆಯಾದ ಕೆಲವು ವರ್ಷಗಳಲ್ಲೇ ನಾನು ಪತಿಯನ್ನು ಕಳೆದುಕೊಂಡೆ.[೧] ಅನಂತರ ನನ್ನ ತಂದೆ ದುಃಖಿಸುತ್ತಿದ್ದರು: ''ನಾನು ಶ್ರೀಮಾತೆಯವರ ಮಾತನ್ನು ಕೇಳಲಿಲ್ಲ. ಈಗ ನೋಡಿದರೆ, ಇವಳಿಗೆ ಮದುವೆ ಮಾಡಿಸದೆ ಇದ್ದಿದ್ದರೇ ಒಳ್ಳೆಯದಿತ್ತು.

೧೯೩೪ರ ಅಕ್ಟೋಬರ್ ೧೭ರಂದು ನನ್ನ ತಂದೆ ತೀರಿಕೊಂಡರು. ಅಂದು ದುರ್ಗಾಷ್ಟಮಿ. ಅಂದು ಮಧ್ಯಾಹ್ನ ಎರಡೂವರೆ ಗಂಟೆಯ ತನಕವೂ ಅವರು ಮನೆಯವರಿಗೆಲ್ಲ ಹೇಳಿದರು, ''ನೀವೆಲ್ಲ ಈಗ ಇಲ್ಲಿಂದ ಆಚೆಗೆ ಹೋಗಿ. ನನ್ನನ್ನು ಕರೆದುಕೊಂಡು ಹೋಗಲು ಶ್ರೀಮಾತೆ ಬಂದಿದ್ದಾರೆ. ಅವರು ಕೆಂಪಂಚಿನ ಸೀರೆ ಉಟ್ಟಿದ್ದಾರೆ.'' ಸ್ವಲ್ಪ ಹೊತ್ತಿನಲ್ಲೇ ಅವರು ಕೊನೆಯುಸಿರೆಳೆದರು. ಆಗ ಮೂರು ಗಂಟೆಯಾಗಿತ್ತು.

ನನ್ನ ತಂದೆಯವರಿಗೆ ಶ್ರೀಮಾತೆ ಒಂದು ರುದ್ರಾಕ್ಷಿ ಮಾಲೆಯನ್ನು ಜಪ ಮಾಡುವುದಕ್ಕಾಗಿ ಶುದ್ಧೀಕರಿಸಿ ಕೊಟ್ಟಿದ್ದರು. ಆ ಮಾಲೆಯಲ್ಲೇ ತಂದೆ ಜಪಮಾಡುತ್ತಿದ್ದರು. ತಂದೆ ತೀರಿಕೊಂಡ ಬಳಿಕ ಒಂದು ದಿನ ನನ್ನ ತಾಯಿ ಸತ್ಯೇನ್ ಮಹಾರಾಜರಿಗೆ (ಸ್ವಾಮಿ ಆತ್ಮಬೋಧಾನಂದ) ಕೇಳಿದ್ದರು, ಆ ಜಪಮಾಲೆಯನ್ನು ಏನು ಮಾಡಲಿ? ಎಂದು. ಅದನ್ನು ಗಂಗೆಗೆ ಹಾಕಲು ಅವರು ಹೇಳಿದ್ದರು. ತಾಯಿ ಅದನ್ನು ಗಂಗೆಗೆ ಹಾಕಲೇ ಇಲ್ಲ. ಶ್ರೀಮಾತೆಯವರೇ ಸ್ವತಃ ಪವಿತ್ರೀಕರಿಸಿಕೊಟ್ಟ ಜಪಮಾಲೆಯನ್ನು ಗಂಗೆಗೆ ಎಸೆಯುವುದೆ? ಅನಂತರ ತಾಯಿ ಈ ವಿಷಯವನ್ನು ನನಗೆ ಹೇಳಿದಾಗ ನಾನಂದೆ: ''ನೀನು ಭಾಗ್ಯವಂತೆ. ಆ ಮಾಲೆಯನ್ನು ನೀನು ಎಸೆದುಬಿಡಲಿಲ್ಲ! ಒಂದು ಲಕ್ಷ ರೂಪಾಯಿ ಕೊಟ್ಟರೂ ಈ ವಸ್ತು ಸಿಗಲಾರದು — ಸ್ವತಃ ಶ್ರೀಮಾತೆಯವರೇ ತಮ್ಮ ಕೈಯಿಂದ ಜಪಮಾಡಿದ ಮಾಲೆಯಲ್ಲವೆ ಅದು!'' ಈಗ ಮಾಲೆ ನನ್ನ ಸಣ್ಣ ತಮ್ಮ ಕಾರ್ತಿಕನ ಬಳಿ ಇದೆ.

ಶ್ರೀಮಾತೆ ನಮಗೆಲ್ಲಾ ತುಂಬಾ ಆಶೀರ್ವಾದ ಮಾಡಿದ್ದರು. ಅವರ ಕೃಪೆಯಿಂದಾಗಿ ನಾನು ಈ ೮೫ನೇ ವಯಸ್ಸಿನಲ್ಲೂ (೧೯೯೧) ಆರೋಗ್ಯದಿಂದ ಓಡಾಡಿಕೊಂಡಿದ್ದೇನೆ. ❖

---

೧ ಈ ವಿಷಯವನ್ನು ಕುರಿತು ಇಂದುಬಾಲಾ ದೇವಿಯ ಸಣ್ಣ ತಮ್ಮನಾದ ಕಾರ್ತಿಕ ಚಂದ್ರ ದತ್ತ ಹೀಗೆ ತಿಳಿಸುತ್ತಾನೆ: ''ಅಕ್ಕನಿಗೆ ೨೬ ವರ್ಷ ವಯಸ್ಸಾಗಿದ್ದಾಗ, ಅವಳ ಜೀವನದಲ್ಲಿ ಒಂದು ದುರಂತ ನಡೆದು ಹೋಯಿತು. ಭಾವ (ಅಕ್ಕನ ಗಂಡ, ನಗೇಂದ್ರ ಘೋಷ್) ಒಂದು ದಿನ ಖಿದಿರ್‌ಪುರದಲ್ಲಿದ್ದ ತನ್ನ ಮನೆಗೆ ಸಮೀಪ, 'ದೊಡ್ಡ ಗಂಗಾ' ನದಿಯಲ್ಲಿ (ಅದರ ಸಮೀಪವೇ ಆದಿಗಂಗಾ ನದಿಯಿತ್ತು: ಆದ್ದರಿಂದ ಆ ಕಾಲದವರು ಹುಗ್ಲೀ ನದಿಯನ್ನು 'ದೊಡ್ಡ ಗಂಗಾ' ಎಂದು ಕರೆಯುತ್ತಿದ್ದರು) ಸ್ನಾನ ಮಾಡಲು ಹೋಗಿದ್ದರು. ಅಲ್ಲಿಂದ ಮರಳಿ ಬರಲಿಲ್ಲ. ಸ್ನಾನ ಮಾಡಲು ಹೋದವರು ನದಿಯಲ್ಲಿ ಮುಳುಗಿದರೋ ಅಥವಾ ಎಲ್ಲೋ ಕಾಣೆಯಾದರೋ ತಿಳಿಯ ಲಿಲ್ಲ. ಸ್ನಾನ ಮಾಡಿ ಮರಳಿ ಬಾರದ್ದರಿಂದ, ಅವರು ಮುಳುಗಿ ಹೋಗಿರ ಬೇಕೆಂದು ಎಲ್ಲರೂ ಭಾವಿಸಿದರು. ಅದನ್ನು ಖಾತ್ರಿಪಡಿಸಲು ಗಂಗೆಯಲ್ಲಿ ಮುಳುಗಿ ಹುಡುಕಲಾಯಿತು; ಆದರೆ ದೇಹ ಸಿಗಲಿಲ್ಲ. ಆಗ ಗಂಗಾತೀರ ದಲ್ಲಿದ್ದ ಒಬ್ಬರು ಸಾಧುಗಳು, 'ಅವನಿಗಾಗಿ ಹುಡುಕಿ ಪ್ರಯೋಜನವಿಲ್ಲ. ಅವನು ನಿಮಗೆ ಎಂದಿಗೂ ಸಿಗಲಾರ' ಎಂದು ಅಲ್ಲಿಗೆ ಬಂದು ಸೇರಿದ್ದ ಜನರಿಗೆ ಹೇಳಿದರು. ಆ ಸಾಧುಗಳು ಮುಂದೆ ಎಲ್ಲೂ ಕಾಣಸಿಗಲಿಲ್ಲ. ಆಗ ಭಾವನ ವಯಸ್ಸು ಮೂವತ್ತು. ಅಕ್ಕನಿಗೆ ನಾಲ್ಕು ವರ್ಷದ ಮಗಳು ಹಾಗೂ ಒಂಬತ್ತು ತಿಂಗಳ ಗಂಡುಮಗುವಿತ್ತು. ಅಕ್ಕನಿಗೆ ಹದಿನೇಳು ವರ್ಷ ವಾಗಿದ್ದಾಗ ಸ್ವಾಮಿ ಶಾರದಾನಂದಜಿ ಅವಳಿಗೆ ಮಂತ್ರದೀಕ್ಷೆ ನೀಡಿದರು.'' *(-ಸಂ)*